ವಿಚಾರಪ್ರಭ

# ವಿಶಿಷ್ಟಾದ್ವೈತ ಸಿದ್ಧಾಂತ

**ಪ್ರೊ. ಜಿ. ಹನುಮಂತರಾವ್**

**ತ**ತ್ತ್ವಶಾಸ್ತ್ರವು ಚಿರಸ್ಥಿರಸತ್ಯವನ್ನು ತಿಳಿಯಬಯಸುತ್ತಾದರೂ ಅದು ಕಾಲಪರಿಸ್ಥಿತಿಗೆ ಅನುಗುಣವಾಗಿ ಪರಮಸತ್ಯವನ್ನು ರೂಪಿಸುತ್ತದೆ. ಶ್ರೀಶಂಕರಾಚಾರ್ಯರು ಜ್ಞಾನಪ್ರಧಾನವಾದ ಅದ್ವೈತವನ್ನೂ ಭಕ್ತಿಪ್ರಧಾನವಾದ ಏಕೇಶ್ವರ ತತ್ತ್ವವನ್ನೂ ಅಧಿಕಾರಭೇದಗಳಿಗೆ ಅನುಗುಣವಾಗಿ ರೂಪಿಸಿದರು. ಆದರೆ ನಂತರದಲ್ಲಿ ಅವರು ತೋರಿಸಿದ ಈಶ್ವರ ಭಾವನೆಗೆ ಹೆಚ್ಚು ಪ್ರಾಧಾನ್ಯ ಕೊಟ್ಟು ಅದನ್ನೇ ಪರಮತತ್ತ್ವವನ್ನಾಗಿ ಬೆಳೆಸಿದ ವೇದಾಂತಿಗಳಲ್ಲಿ ಶ್ರೀರಾಮಾನುಜಾಚಾರ್ಯರು ಪ್ರಮುಖರು. ಅವರ ಕಾಲಕ್ಕಾಗಲೇ ಭಾರತದಲ್ಲಿ ಮುಸಲ್ಮಾನರ ಆಧಿಪತ್ಯ ಆರಂಭವಾಗಿತ್ತು. ಅವರು ಸಾಮಾನ್ಯರನ್ನು ಆ ಮತಕ್ಕೆ ಪರಿವರ್ತಿಸುತ್ತಿದ್ದರು. ಈ ಸಂದಿಗ್ಧ ಸಂದರ್ಭದಲ್ಲಿ ಭಾರತದ ಐಕಮತ್ಯಕ್ಕೆ ಒಂದೇ ದೇವತೆಯಲ್ಲಿ ಅಚಲಭಕ್ತಿ ಅಗತ್ಯವೆಂದು ಮನಗಂಡವರು ರಾಮಾನುಜಾಚಾರ್ಯರು. ಅದಲ್ಲದೆ ಅವರು ದ್ರಾವಿಡದೇಶದಲ್ಲಿ ತುಂಬ ಪ್ರಿಯವಾಗಿದ್ದ ವೈಷ್ಣವ ಆಳ್ವಾರುಗಳ ತಮಿಳು ಪ್ರಬಂಧಗಳಿಗೂ, ವೈಷ್ಣವ ಪಾಂಚರಾತ್ರಾಗಮಗಳಿಗೂ ಮತ್ತು ವೈಷ್ಣವ ಪುರಾಣಗಳಿಗೂ ಹೆಚ್ಚು ಗಮನಕೊಟ್ಟು, ಅವುಗಳಿಗೆ ವೇದದಷ್ಟೇ ಶ್ರೇಷ್ಠ ಸ್ಥಾನವನ್ನು ಕೊಟ್ಟರು. ವೇದದಲ್ಲಿ ಹೇಳಿರುವ, ಸಕಲ ಪರಿಪೂರ್ಣ ಗುಣಗಳನ್ನು ಹೊಂದಿದ, ಲೋಕವನ್ನೂ ಆತ್ಮಗಳನ್ನೂ ತನ್ನ ಶರೀರವಾಗಿ ಉಳ್ಳ ನಾರಾಯಣನೊಬ್ಬನೇ ಪರಮದೇವತೆಯೆಂದು ಪ್ರತಿಪಾದಿಸಿದರು. ಅವನಲ್ಲಿ ಸಂಪೂರ್ಣ ಶರಣಾಗತಿ ಅಗತ್ಯವೆಂದೂ, ಅದಕ್ಕಾಗಿ ಅವನನ್ನು ಮೂರ್ತಿರೂಪದಲ್ಲಿ ಆರಾಧಿಸುವುದು ಅಗತ್ಯವೆಂದೂ ಬೋಧಿಸಿದರು.

ಬ್ರಹ್ಮ (ದೇವರು), ವಿಶ್ವ, ಜೀವಾತ್ಮಗಳು ಈ ಮೂರೂ ವಿಶಿಷ್ಟವಾದುವು. ಅವುಗಳ ಸಂಬಂಧ ಒಂದನ್ನೊಂದು ಎಡೆಬಿಡದ ಅಪೃಥಕ್ ಸಂಬಂಧ ಎಂಬ ತತ್ತ್ವವೇ ವಿಶಿಷ್ಟಾದ್ವೈತ. ಇದಕ್ಕೆ ಶ್ರೀವೈಷ್ಣವ ಸಿದ್ಧಾಂತವೆಂದೂ ಹೆಸರು. ವಿಶ್ವ, ಆತ್ಮಗಳಿಂದ ಪರಸ್ಪರ ಭಿನ್ನವಾಗಿವೆ. ಅದಲ್ಲದೆ ಅವೆರಡೂ ಬ್ರಹ್ಮದಿಂದಲೂ ಭಿನ್ನ. ಆದರೂ ಈ ಮೂರೂ ಒಂದೇ ಅಲ್ಲದಿದ್ದರೂ, ಅವು ಒಂದನ್ನೊಂದು ಬಿಟ್ಟು ಇರುವುದಿಲ್ಲ.

ಇಲ್ಲಿ ಬ್ರಹ್ಮವೆಂದರೆ ಶ್ರೀಮನ್ನಾರಾಯಣ. ಅವನು ಬ್ರಹ್ಮ. ವಿಶ್ವ ಮತ್ತು ಆತ್ಮಗಳ ಅಂತರ್ಯಾಮಿಯಾಗಿ ಅವುಗಳನ್ನು ಪ್ರೇರೇಪಿಸುತ್ತಾನೆ. ವಿಶ್ವ ಆತ್ಮಗಳು ಒಟ್ಟಿಗೆ ಸೇರಿ ಶ್ರೀಮನ್ನಾರಾಯಣನ ಶರೀರವಾಗುತ್ತವೆ. ಶರೀರಿ ಶ್ರೀಮನ್ನಾರಾಯಣನೇ ಆಗಿದ್ದಾನೆ. ಈ ಮೂರೂ ಸೇರಿ ಪೂರ್ಣವಾದ ಒಂದೇ ತತ್ತ್ವವೇ ವಿಶಿಷ್ಟಾದ್ವೈತ ತತ್ತ್ವ. **ವಿಶಿಷ್ಟ ಅಂತರ್ಭಾವ ಏವ ಐಕ್ಯಂ (ಶ್ರೀಭಾಷ್ಯ)** –'ಈ ಮೂರರ ಅಂತರ್ಭಾವವೇ ಐಕ್ಯ.' ಎಲ್ಲವನ್ನೂ ಒಳಗೊಂಡಿರುವುದೇ ಈ ಪೂರ್ಣದ ವೈಶಿಷ್ಟ್ಯ.

*ದಿವಂಗತ ಲೇಖಕರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಅನೇಕ ಉದ್ಗ್ರಂಥಗಳನ್ನು ರಚಿಸಿದ್ದಾರೆ.*

## ಈಶ್ವರ

ಪರಬ್ರಹ್ಮವೇ ಈಶ್ವರ. ಅವನೇ ನಾರಾಯಣ. ಅದ್ವೈತಿಗಳು ಭಾವಿಸಿರುವಂತೆ ಈಶ್ವರನು ಮಾಯೆಯೆಂಬ ಉಪಾಧಿಗೆ ಒಳಪಟ್ಟವನಲ್ಲ. ಪರಬ್ರಹ್ಮನೇ ನಿರುಪಾಧಿಕವಾದ ಈಶ್ವರ. ಈಶ್ವರನೇ ಪರಬ್ರಹ್ಮ. ಅವನು ಗುಣರಹಿತನಾದ ನಿರ್ಗುಣ ಬ್ರಹ್ಮವಲ್ಲ. ಅವನು ಪರಿಪೂರ್ಣವಾದ ಸಚ್ಚಿದಾನಂದರೂಪನು. ಪರಬ್ರಹ್ಮನು ವಿಶೇಷಣ ಸಹಿತನಾದವನು. ಪ್ರಕೃತಿ ಮತ್ತು ಜೀವರು ಪರಸ್ಪರ ಭಿನ್ನ ಹಾಗೂ ಪರಬ್ರಹ್ಮದಿಂದ ಭಿನ್ನವಾದರೂ ಕೂಡ ಅವು ಪರಬ್ರಹ್ಮದ ಶರೀರವಾಗಿ ಅವನೊಳಗೆ ಸೇರಿಕೊಂಡಿವೆ. ಬ್ರಹ್ಮ ಮತ್ತು ಅವನ ಶರೀರವಾದ ಪ್ರಕೃತಿ ಮತ್ತು ಆತ್ಮಗಳು ಸೇರಿಯೇ ಪೂರ್ಣವಾದ ಒಂದೇ ಪರಮ ಸತ್ ಆಗಿದೆ. ಈ ಮೂರೂ ಸೇರಿ ಒಂದಾದ ಪೂರ್ಣತತ್ತ್ವದ ಹೊರಗೆ ಬೇರೆ ಯಾವುದೂ ಇಲ್ಲ. **ಸರ್ವಂ ಖಲ್ವಿದಂ ಬ್ರಹ್ಮ** ಎಂಬ ಶ್ರುತಿವಾಕ್ಯದ ಅರ್ಥ ಇದೇ. ಅಸ್ತಿತ್ವದಲ್ಲಿರುವ ಎಲ್ಲ ಚರಾಚರ ವಸ್ತುಗಳೂ ಭಗವಂತನ ಶರೀರರೂಪವಾಗಿದ್ದು, ಅವನಲ್ಲಿ ಎಡೆಬಿಡದೆ ಅಡಗಿವೆ. ಈಶ್ವರನು ಸಾಧನೆಗೆ ಸಹಕಾರಿಯಾದ ಉಪಾಯನೂ ಹೌದು; ಅಂತ್ಯ ಫಲವಾದ ಉಪೇಯನೂ ಹೌದು.

ಬ್ರಹ್ಮನು ವಿಶ್ವಕ್ಕೆ ಉಪಾದಾನ ಮತ್ತು ನಿಮಿತ್ತ ಕಾರಣ. ಅವನಿಗಿಂತ ಹೊರಗಡೆ ಬೇರೆ ಯಾವುದೂ ಇರಲಾರದು. ಆದ್ದರಿಂದ ಅವನು ಇಡೀ ವಿಶ್ವಕ್ಕೆ **ಉಪಾದಾನ ಕಾರಣ**. ವಿಶ್ವದಲ್ಲಿರುವುದೆಲ್ಲ ಅವನ ನಿಯಮಕ್ಕೆ ಒಳಪಟ್ಟಿರುವುದರಿಂದ ಅವನು ಅವುಗಳ **ನಿಮಿತ್ತ ಕಾರಣ**. ಅವನು ಜೀವಿಗಳನ್ನು **ಭೋಕ್ತರಾಗಿಯೂ** ಪ್ರಕೃತಿಯನ್ನು **ಭೋಗ್ಯ**ವಾಗಿಯೂ ನಿಯಂತ್ರಿಸುತ್ತಾನೆ. ಅವನು ಪಾಪಪುಣ್ಯಗಳ ಫಲವನ್ನು ವಿಧಿಸುವ ಧರ್ಮಾಧ್ಯಕ್ಷನೂ ಹೌದು. ಪಾಪಪುಣ್ಯಗಳಿಗೆ ಜೀವಿಗಳೇ ಕಾರಣ. ಅವುಗಳಿಗೆ ಪರಮೇಶ್ವರನು ಕಾರಣನಲ್ಲ. ಆದ್ದರಿಂದ ಅವುಗಳ ಫಲವಾದ ಸುಖದುಃಖಗಳು ಅವನಿಗೆ ಸೇರಿದವಲ್ಲ.

ಪರಮೇಶ್ವರನು ವಿಶ್ವವ್ಯಾಪಕ ಮತ್ತು ಅತೀತ. ಅವು ಅವನ ಎರಡು ಮುಖಗಳು. ಭಗವಂತನು **ಆಧಾರ** (ಪ್ರಕಾರಿ), **ನಿಯಂತ್ರಕ** (ನಿಯಂತಾ) ಮತ್ತು **ಮುಖ್ಯ** (ಶೇಷಿ). ಜೀವಿಗಳು ಮತ್ತು ಪ್ರಕೃತಿಯ ವಿವಿಧ ಪ್ರಕಾರಗಳು ಅವನ **ಆಧೇಯಗಳು, ನಿಯಮ್ಯ** (ನಿಯಂತ್ರಿತವಾದುವು) ಮತ್ತು **ಶೇಷರು**. ಅವನು ಕೇವಲ ವಿಧಾಯಕನು ಮಾತ್ರವಲ್ಲ, ಅನಂತ ಜ್ಞಾನ, ಅನಂತ ಶಕ್ತಿ, ಅನಂತ ವೀರ್ಯ, ಅನಂತ ವೈಭವ, ಅನಂತ ಪ್ರಕಾಶಗಳೆಂಬ ಪರಿಪೂರ್ಣ ಗುಣಗಳನ್ನು ಹೊಂದಿರುವವನು.

ನಾರಾಯಣನ ಶಕ್ತಿರೂಪ ಲಕ್ಷ್ಮೀ. ಅವನು ಸದಾ ಆ ಶಕ್ತಿಯಿಂದ ಕೂಡಿಯೇ ಇರುತ್ತಾನೆ. ಲಕ್ಷ್ಮಿಯ ರೂಪಗಳು ಎರಡು: **ಕ್ರಿಯಾ** (ನಿಯಂತ್ರಣ) ಮತ್ತು **ಭೂತಿ** ಪರಿಣಾಮ. ಇವುಗಳ ಮೂಲಕ ಭಗವಂತನು ವಿಶ್ವದ ಉಪಾದಾನ ಮತ್ತು ನಿಮಿತ್ತ ಕಾರಣನಾಗುತ್ತಾನೆ. ಭಗವಂತನು ತನ್ನನ್ನು ಯಥಾವತ್ತಾಗಿ ತಿಳಿದುಕೊಳ್ಳಲು ಅಶಕ್ತರಾದ ಭಕ್ತರ ಮೇಲಿನ ಪ್ರೀತಿಯಿಂದ **ವ್ಯೂಹ, ವಿಭವ ಮತ್ತು ಅರ್ಚಾ** ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ವಿಷ್ಣುವಿನ ವ್ಯೂಹರೂಪಗಳು ನಾಲ್ಕು: ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ. ವಿಭವ ರೂಪಗಳು ರಾಮಕೃಷ್ಣಾದಿ ಅವತಾರಗಳು. ದೇವಸ್ಥಾನದಲ್ಲಿರುವ ವಿಗ್ರಹಗಳು ಅರ್ಚಾವತಾರಗಳು.

## ಜೀವಿ

ಆತ್ಮ ಮತ್ತು ಪರಮಾತ್ಮನಾದ ಬ್ರಹ್ಮ ಒಂದೇ ಎಂಬ ಅದ್ವೈತಿಗಳ ವಾದವನ್ನು ರಾಮಾನುಜರು ಖಂಡಿಸುತ್ತಾರೆ. ಜೀವಾತ್ಮಗಳು ಅನೇಕ, ಅವು ಒಂದರಿಂದ ಒಂದು ಭಿನ್ನ. ಬದ್ಧ ಜೀವಿಗಳೂ ಒಬ್ಬರಿಂದ ಮತ್ತೊಬ್ಬರು ಭಿನ್ನ, ಹಾಗೆಯೇ ಮುಕ್ತ ಜೀವಿಗಳೂ ಭಗವಂತನಿಂದ ಭಿನ್ನ. ಅವರು ಪರಮಾತ್ಮನ ಶರೀರವಾಗಿರುತ್ತಾರೆಯೇ ಹೊರತು, ಎಂದೆಂದಿಗೂ ಪರಮಾತ್ಮನ ಆತ್ಮವೇ ಆಗುವುದಿಲ್ಲ.

ಪರಮಾತ್ಮನಿಂದ ಭಿನ್ನವಾದ ಜೀವಾತ್ಮ ಅಣುರೂಪದ್ದು. ಅದು ಅಣುವಾದರೂ ಸಂಕೋಚ ವಿಕಾಸವಾಗಬಲ್ಲುದು. ಜ್ಞಾನದ ಮೂಲಕ ಶರೀರದ ಎಲ್ಲ ಭಾಗಗಳಲ್ಲಿಯೂ ತೋರುವ ಸುಖವನ್ನೂ, ನೋವನ್ನೂ ಅದು ಅನುಭವಿಸುತ್ತದೆ. ಜ್ಞಾನ ಅದರ ನಿತ್ಯಗುಣ. ಆದರೆ ಬಂಧನಾವಸ್ಥೆಯಲ್ಲಿ ಅದರ ಕರ್ಮದ ದೋಷಗಳ ಸಲುವಾಗಿ ಆ ಜ್ಞಾನ ಸಂಕುಚಿತವಾಗಿರುತ್ತದೆ. ಆತ್ಮದ ಸ್ವರೂಪ ಈಶ್ವರನಿಗೆ ಸದೃಶ ವಾದದ್ದೆಂಬ ತಿಳಿವನ್ನು ಕರ್ಮದ ದೋಷ ಮರೆಮಾಡುತ್ತದೆ. ಬಂಧನದ ಕಾಲದಲ್ಲೂ ಜನ್ಮಾಂತರಗಳಲ್ಲೂ ಮುಕ್ತದಿಶೆಯಲ್ಲೂ ಅದು ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿರುತ್ತದೆ; ಅಹಂಬುದ್ಧಿಯನ್ನು ಪಡೆದೇ ಇರುತ್ತದೆ. ಅದು ಪರಮೇಶ್ವರನಿಂದ ಭಿನ್ನವಾದರೂ ಅವನೇ ಅದರ ಅಂತರ್ಯಾಮಿಯಾದ್ದರಿಂದ ಅವನೊಡನೆ ನಿಕಟ ಸಂಬಂಧವನ್ನು ಪಡೆದಿರುತ್ತದೆ. **ಪ್ರಕೃತಿ ಅಚೇತನ ಜಡ ದ್ರವ್ಯ. ಜೀವಾತ್ಮನಾದರೋ ಚೇತನ ದ್ರವ್ಯ.** ಜೀವಾತ್ಮನು ಪ್ರಕೃತಿಯನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಬಲ್ಲನು. ಜೀವಾತ್ಮ ಕರ್ತಾ ಮತ್ತು ಭೋಕ್ತಾ; ಪ್ರಕೃತಿ ಅದರ ಭೋಗ್ಯವಸ್ತು. ಕರ್ತನೂ ಭೋಕ್ತನೂ ಆದ್ದರಿಂದ ಅವನಿಗೆ ಸ್ವಾತಂತ್ರ್ಯವಿದೆ, ಪ್ರಕೃತಿಗೆ ಸ್ವಾತಂತ್ರ್ಯವಿಲ್ಲ. ಆದರೂ ಜೀವಾತ್ಮನಿಗೆ ಪರಮ ಸ್ವಾತಂತ್ರ್ಯವಿಲ್ಲ. ಆ ಸ್ವಾತಂತ್ರ್ಯ ಪರಮಾತ್ಮನ ಅಧೀನಕ್ಕೆ ಒಳಪಟ್ಟ ಸ್ವಾತಂತ್ರ್ಯ. ಅವನ ನಿಯಮಾನುಸಾರ ನಡೆಯಬೇಕಾದುದೇ ಜೀವಿಯ ಕರ್ತವ್ಯ.

## ಜಗತ್ತು

ರಾಮಾನುಜರ ಪ್ರಕಾರ ಮೂಲದ್ರವ್ಯ ನಾರಾಯಣನೊಬ್ಬನೇ. ಉಳಿದವು ದ್ರವ್ಯಗಳೇ ಆಗಲಿ, ಅವುಗಳ ಗುಣಗಳೇ ಆಗಲಿ, ಅವೆಲ್ಲವೂ ಸೇರಿ ಶ್ರೀಮನ್ನಾರಾಯಣನ ವಿಶೇಷಣಗಳು. ಭಗವಂತನು ಪ್ರಧಾನ ದ್ರವ್ಯ, ವಿಶ್ವ ಅದ್ರವ್ಯ. ರಾಮಾನುಜರ ಪ್ರಕಾರ ಪ್ರಕೃತಿ ಸ್ವತಂತ್ರವಲ್ಲ. ಅದು ಜೀವರುಗಳಿಗೂ ಪರಮಾತ್ಮನಿಗೂ ಅಧೀನ. ಸತ್ವ, ರಜಸ್ ಮತ್ತು ತಮಸ್ – ಈ ಮೂರು ಗುಣಗಳು ಪ್ರಕೃತಿಯ ಅಂಗ ವಿಶೇಷಣಗಳು. ಅಂದರೆ, ಬಿಳುಪು, ಕೆಂಪು, ಕಪ್ಪು ಮೊದಲಾದವು ಗಳಂತೆ ಅವು ಪ್ರಕೃತಿಯ ಗುಣಗಳು. ಇಡೀ ಭೌತಪ್ರಪಂಚ ಮತ್ತು ಅದರ ಅಗಣಿತ ಭಿನ್ನರೂಪಗಳು ಈಶ್ವರನ ಸಂಕಲ್ಪಕ್ಕೆ ಅಧೀನವಾಗಿ ರೂಪುಗೊಳ್ಳುತ್ತವೆ. ಪ್ರಕೃತಿ ಮತ್ತು ಜೀವಾತ್ಮ – ಇವೆರಡೂ ಬ್ರಹ್ಮನ ಶರೀರವೇ ಆದರೂ ಜೀವಾತ್ಮನನ್ನು ಬ್ರಹ್ಮದ ಒಳಶರೀರವೆಂದೂ, ಪ್ರಕೃತಿ ಹೊರಶರೀರವೆಂದೂ ರಾಮಾನುಜರು ಭಾವಿಸುತ್ತಾರೆ. ಪ್ರಕೃತಿ ಎಂದೆಂದಿಗೂ ಚೇತನ ವಸ್ತುವಾಗಲಾರದು. ಬ್ರಹ್ಮದಲ್ಲಿ ಸೇರಿದ ಪ್ರಕೃತಿ ಮಾತ್ರ ಶುದ್ಧಸತ್ವ ಆಗಬಲ್ಲುದು.

## ಜೀವನ ತತ್ತ್ವ

ಜೀವರುಗಳು ತಾವು ಪರಮೇಶ್ವರನ ಅಂಶವೆಂದೂ, ಅವನ ಒಳಶರೀರವೆಂದೂ ಅರಿಯದೆ ಅಜ್ಞಾನದಿಂದ ಸಂಸಾರದಲ್ಲಿ ಸಿಕ್ಕಿ ನರಳುತ್ತಾರೆ. ಅದಕ್ಕೆ ಅವರ ಪೂರ್ವಕರ್ಮವೇ ಕಾರಣ. ಒಂದಲ್ಲ ಒಂದು ಕಾಲದಲ್ಲಿ ಅವರಿಗೆ ತಮ್ಮ ಅಂತರಾತ್ಮನ ಪ್ರಚೋದನೆಯಿಂದ ಆತ್ಮಸ್ವರೂಪದ ಅರಿವು ಹುಟ್ಟಿ ಆರ್ತರಾಗಿ ಭಗವಂತನಲ್ಲಿ ಮೊರೆ ಇಡುತ್ತಾರೆ. ಆಗ ಭಗವಂತನು ಅವರಲ್ಲಿ ಭಕ್ತಿಯನ್ನು ಹುಟ್ಟಿಸುತ್ತಾನೆ. ರಾಮಾನುಜರ ಪ್ರಕಾರ ಈ ಭಕ್ತಿಯನ್ನು ಬೆಳೆಸಿಕೊಳ್ಳುವುದೇ ಮುಕ್ತಿಗೆ ಸಾಧನ.

ಭಕ್ತಿ ಎಂದರೆ ಕುರುಡು ನಂಬಿಕೆಯಲ್ಲ. ಅದು ಉಪನಿಷತ್ತುಗಳು ಹೇಳಿರುವ ಧ್ಯಾನ ಮತ್ತು ನಿದಿಧ್ಯಾಸನ ರೂಪವಾದ ಜ್ಞಾನ. ಅದು ಸಿದ್ಧಿಸಬೇಕಾದರೆ ಕರ್ಮ ಸವೆಯಬೇಕು. ಭಗವದ್ಗೀತೆ ಬೋಧಿಸುವ ನಿಷ್ಕಾಮ ಕರ್ಮವನ್ನು ಆಚರಿಸಿದಾಗಲೇ ಕೂಡಿಟ್ಟ ಕರ್ಮ ಸವೆಯುವುದು. ಈಶ್ವರಾರ್ಪಣವೆಂದು ಮಾಡಿದ ಕರ್ಮವೇ ಮುಕ್ತಿ ಪಡೆಯಲು ಸಹಕಾರಿ.

ಭಕ್ತಿಯಿಂದ ಭಗವಂತನ ಸಾಕ್ಷಾತ್ಕಾರ ಪಡೆಯಲು ಅರ್ಹರಾಗಬೇಕಾದರೆ ಭಕ್ತನು ಹನ್ನೊಂದು ವಿಧವಾದ ಸಾಧನೆಗಳನ್ನು ಮಾಡಬೇಕು. ೧. ಐಹಿಕ ಸುಖಗಳಿಗೆ ಬಲಿಯಾಗಬಾರದೆಂಬ **ವಿವೇಕ** ೨. ಇಂದ್ರಿಯ ಭೋಗ್ಯವಸ್ತುಗಳ ಕಡೆಗೆ ಬೆನ್ನು ತಿರುಗಿಸಿ, ಭಗವಂತನ ಕಡೆಗೆ ಮನಸ್ಸನ್ನು ತಿರುಗಿಸುವ **ವಿಮೋಕ** ೩. ಸತತವಾಗಿ ಭಗವಂತನ ಕಡೆಗೆ ಮನಸ್ಸನ್ನು ತಿರುಗಿಸುವ **ಅಭ್ಯಾಸ** ೪. ಇತರರಿಗೆ ಒಳ್ಳೆಯದನ್ನು ಮಾಡುವುದು ೫. ಇತರರಿಗೆ ಒಳ್ಳೆಯದಾಗಲೆಂದು ಬಯಸುವುದು – **ಕಲ್ಯಾಣ** ೬. **ಸತ್ಯವ್ರತ** ೭. **ಋಜುತ್ವ** (ಆರ್ಜವ) ೮.**ದಯಾ** ೯.**ಅಹಿಂಸೆ** ೧೦. **ದಾನ** ೧೧. ಎಂಥಾ ತೊಡಕುಗಳು ಕಾಣಿಸಿಕೊಂಡರೂ ಹತಾಶರಾಗದೆ ಆಶಾಭಾವನೆಯಿಂದ ಕೂಡಿರುವುದು –**ಅನವಸಾದ**.

ಹೀಗೆ ಭಕ್ತಿಯೆಂಬುದು ಕೇವಲ ಭಾವೋದ್ರೇಕವಲ್ಲ. ಅದು ಚಿತ್ತದ ಮತ್ತು ಬುದ್ಧಿಯ ದೀರ್ಘಕಾಲದ ತರಬೇತಿ. ಅದಕ್ಕೆ ಕರ್ಮಯೋಗ ಮತ್ತು ಜ್ಞಾನಯೋಗ ಅಗತ್ಯ ಸಹಕಾರಿ ಸಾಧನಗಳು. ಇವುಗಳೆಲ್ಲದರಿಂದ ಕೂಡಿದ ಅಂತಿಮ ಸಾಧನವೇ ಭಕ್ತಿಯೋಗ. ಇದರಿಂದ ತಾನು ಪರಮಾತ್ಮನ ಅಂಶ ಎಂಬ ಸ್ಥಿರವಾದ ಸ್ಮೃತಿ ಹುಟ್ಟುತ್ತದೆ. ಇದು ಭಗವಂತನ ಸಾಕ್ಷಾತ್ಕಾರವಲ್ಲ. ಭಗವಂತನಲ್ಲಿ ಸ್ಥಿರವಾದ ನೆಚ್ಚಿಕೆ ಮಾತ್ರ . ರಾಮಾನುಜರ ಪ್ರಕಾರ ಜೀವನ್ಮುಕ್ತಿ ಇಲ್ಲ. ಈ ಬಗೆಯ ಸ್ಮೃತಿ ಪಡೆದ ಜೀವರುಗಳು ದೇಹತ್ಯಾಗ ಮಾಡಿ ವೈಕುಂಠವನ್ನು ಸೇರಿದಾಗ ಅವರಿಗೆ ಕ್ರಮಕ್ರಮವಾಗಿ **ಸಾಲೋಕ್ಯ, ಸಾಯುಜ್ಯ, ಸಾಮೀಪ್ಯ, ಸಾರೂಪ್ಯ** ಮುಕ್ತಿ ದೊರೆಯುತ್ತವೆ.

ಭಕ್ತಿಯೊಂದೇ ಮುಕ್ತಿಗೆ ಸಾಧನವಲ್ಲ. ಆಳ್ವಾರುಗಳು ಎತ್ತಿ ಹಿಡಿದಿರುವ ಪ್ರಪತ್ತಿಯೂ ಒಂದು ಸಾಧನ. ಪ್ರಪತ್ತಿ ಎಂದರೆ ಸಂಪೂರ್ಣವಾಗಿ ತನ್ನನ್ನು ಭಗವಂತನಿಗೆ ಒಪ್ಪಿಸಿಕೊಳ್ಳುವುದು. ಪ್ರಪತ್ತಿ ಶರಣಾಗತಿಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದೆ. "ನೀನೇ ಶರಣು, ನೀನಲ್ಲದೆ ಮತ್ತೆ ಯಾವ ಗತಿಯೂ ನನಗೆ ಇಲ್ಲ" – ಈ ಮನೋಭಾವದಿಂದ ಆತ್ಮಸಮರ್ಪಣೆ ಮಾಡಿಕೊಳ್ಳುವುದೇ ಪ್ರಪತ್ತಿ.

**(ಆಧಾರ: ಸಾಹಿತ್ಯವಾಹಿನಿ, ಪ್ರಕಾಶಕರು: ಡಿ.ವಿ.ಕೆ. ಮೂರ್ತಿ, ಮೈಸೂರು)**